ಕಥೆ




## ಸಪ್ನಾ ಕೋಟೇಶ್ವರ ಕಟ್ಟಿ

ಕಲೆ: ರೂಪಶ್ರೀ ಕಲ್ಲಿಗನೂರು


# ಖಾಲಿ ಪಾಟಿ

ಅಶ್ವತ್ಥ ವೃಕ್ಷದ ಕೆಳಗಿನ ಏಳು ಹೆಡೆಯ ನಾಗನಿಗೆ ಇನ್ನೇನು ಬಗ್ಗಿ ನಮಸ್ಕರಿಸಬೇಕು. ಆಗಲೇ ಮೋಡ ಗರ್ಜಿಸಿ ಸಣ್ಣಗೆ ಹನಿ ಒಡೆದಿತ್ತು, ಕೈಯ್ಯಲ್ಲಿದ್ದ ಹೂಬತ್ತಿ ಒದ್ದೆಯಾದ್ರೆ ದೀಪ ಉರಿಯೋದಿಲ್ಲವೆಂದು ತೆಂಗಿನಕಾಯಿ, ತಂಬಿಟ್ಟಿನ ನೈವೇದ್ಯ ತುಂಬಿದ್ದ ತಟ್ಟೆ ನೆಲಕ್ಕಿಟ್ಟು ಬತ್ತಿಗಳನ್ನು ಸೆರಗಿಗೆ ಕಟ್ಟಿಕೊಳ್ಳಲು ಕೈ ಹಿಂದಾಡಿಸಿದರೆ... ಸೆರಗೇ ಇಲ್ಲ. ಬೆನ್ನ ಮೇಲೆ ಕೈಯಾಡಿಸಿಕೊಂಡರೆ ಕುಪ್ಪುಸವೂ ಇಲ್ಲ, ಬರಿ ಚರ್ಮ ತಣ್ಣಗೆ ಕೊರೆದಿತ್ತು, ಥೇಟ್ ಹಾವಿನಂತೆ.. –ಮರುಕ್ಷಣ ಚಿಲ್ಲನೆ ಮೈತುಂಬ ಒಡೆದ ಬೆವರಿಗೆ ಹತ್ತಿದ್ದ ಝೊಂಪು ತಿಳಿಯಾಗಿತ್ತು. ಅಬ್ಬಾ ಎಂಥಾ ಭಯಂಕರ ಕನಸು! ಕೈಗೆ ಹಾವಿನ ನುಣುಪು ಮೈ ಹತ್ತಿದಂತಾಗಿ ತಿಕ್ಕಿ ತಿಕ್ಕಿ ಸೆರಗಿಗೆ ಕೈಯೊರೆಸಿಕೊಂಡರು, ಹಿಂದಿನ ದಿನ ಸಂಜೆಯೂ ಪಾರ್ಟಿಯಲ್ಲಿ ಹಾಗೆಯೇ ಕೈ ಒರೆಸಿಕೊಂಡಿದ್ದು ನೆನಪಾಗಿ ಸರಯೂತಾಯಿಗೆ ಅಳುವುಕ್ಕಿ ಬಂತು.

ಮತ್ತೆ ಸರಿಯಾಗಿ ಹಾಸಿಗೆಯಲ್ಲಿ ಎದ್ದು ಕುಳಿತು ವಿಚಾರ ಮಾಡಿದರು. ಕನಸಿನಲ್ಲಿ ಬಂದದ್ದು ಗೌರಿಬಿದನೂರಿನ ವಿದುರಾಶ್ವತ್ಥ ಕಟ್ಟೆಯಾ? ಹೌದು. ಖಂಡಿತ ಅದೇ, ಹಸಿರು ಅಶ್ವತ್ಥ ಮರ, ಕೆಳಗೆ ಐದು ಹೆಡೆ, ಏಳು ಹೆಡೆಯ, ಉದ್ದಕ್ಕೆ ಮಲಗಿದ, ಸಿಂಬಿ ಸುತ್ತಿಕೊಂಡ, ಹೆಡೆಯೆತ್ತಿ ಫೂತ್ಕರಿಸುತ್ತಿರುವ ಹೀಗೆ ನಾನಾ ಸರ್ಪಶಿಲೆಗಳ ಸಾಲಿರೋದೇ ಅಲ್ಲಿ. ಅಲ್ಲಿಯೇ ಅಲ್ಲವೇ ರವಿ ಚಿಕ್ಕವನಿದ್ದಾಗ ಮಾವ ನಾಗಪ್ರತಿಷ್ಠಾನ ಮಾಡಿಸಿದ್ದು? 'ಅಪ್ಪ ಅಮ್ಮಾ ಅಜ್ಜಾ' ಎಂಬ ಮೂರು ಪದಗಳ ಹೊರತು ನಾಲ್ಕನೇ ಮಾತನಾಡದಿದ್ದ ರವಿ ಒಂದಿನ ನಾದಿನಿಯ ಮಗನೊಟ್ಟಿಗೆ ಆಡ್ತಾ ಏನೋ ಜಗಳ ಬಂದು 'ಹೋಗೋ... ಹೀಗೆ ಖೊಟ್ಟಿ ಆಡಿದ್ರೆ ಅಲ್ಲಾ ಮಾಫ್ ನಹೀ ಕರೇಗಾ' ಅಂದು ತಟ್ಟನೆ ಓಡಿ ಹೋಗಿ ಬಿಟ್ಟಿದ್ದ. ಅದನ್ನು ಕೇಳಿ ಪ್ರಳಯವಾಯ್ತೇನೋ ಎಂಬಂತೆ ಮಾವ ಗಲಾಟೆ ಮಾಡಿ ಹುಡುಗನನ್ನು ಅಟ್ಟಿಸಿಕೊಂಡು ಹೋಗಿ ಹೊಡೆದು ಕಡೆಗೆ, 'ಮಗೂಗೆ ಕೆಟ್ಟ ಕಣ್ಣು ಬಡಿದಿದೆ' ಅಂತ ಠರಾಯಿಸಿ ಮರುದಿನವೇ ಇಲ್ಲಿ ವಿದುರಾಶ್ವತ್ಥ ಕಟ್ಟೆಗೆ ಸಕುಟುಂಬ ಬಂದು ನಾಗ ಪ್ರತಿಷ್ಠಾನ ಮಾಡಿಸಿದ್ದರು.

ಪಂಚ ಪಾತಕಗಳಿಗೆ ರಾಮಬಾಣ ನಾಗಪ್ರತಿಷ್ಠಾನ ಅಂತಾರೆ, ಈಗಲೂ ಅದನ್ನೇ ಮಾಡ್ಸಬೇಕೋ ಏನೋ.

ನೆನಪಿನಾಳಕ್ಕಿಳಿದಿದ್ದ ಮನಸ್ಸು ಮತ್ತೆ ಮೇಲೇರಿ ಬಂತು. ಅದರೊಟ್ಟಿಗೇ ನಿನ್ನೆಯ ಪ್ರಸಂಗ ನೆನಪಾಗಿ ವಾಂತಿಯೂ ನುಗ್ಗಿ ಬಂದು ಸಿಂಕಿನ ಬಳಿಗೋಡಿದರು.

'ಅಲ್ಲ, ಸೀತಾ ಅಂತ ಹೆಸರಿಟ್ಕೊಂಡವ್ರ ಮನೇಲೂ ಮಾಂಸಾಹಾರ ಇರ್ತದೆ ಅಂತ ಗೊತ್ತಿದ್ದರೆ ಅವಳ